MYS/2897/17

# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಎಂವೈಎಸ್\2897\2017\ಉನಿವಿ–4 ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:16/10/2018

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ದೂರುದಾರರಾದ ಶ್ರೀ.ಮಾದೇಗೌಡ, ಸದಸ್ಯರು, ಹೆಬ್ಬಾಳು ಗ್ರಾಮ ಪಂಚಾಯತ್, ಕೆ.ಆರ್.ನಗರ ತಾಲ್ಲೂಕ್, ಮೈಸೂರು ಜಿಲ್ಲೆ ರವರ ದೂರನ್ನು ಪರಿಹರಿಸುವ ಬಗ್ಗೆ.

*********

ಮೈಸೂರು ಜಿಲ್ಲೆ ಕೆ.ಆರ್.ನಗರ ತಾಲ್ಲೂಕ್ ಹೆಬ್ಬಾಳು ಗ್ರಾಮ ಪಂಚಾಯತ್ ಸದಸ್ಯರಾಗಿದ್ದ ಶ್ರೀ.ಮಾದೇಗೌಡ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಮೈಸೂರು ಜಿಲ್ಲೆ ಕೆ.ಆರ್.ನಗರ ತಾಲ್ಲೂಕ್ 1) ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಮತ್ತು 2) ಹೆಬ್ಬಾಳು ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ (ಪ್ರಭಾರ) ಶ್ರೀ.ಪುಟ್ಟೇಗೌಡ (ಇನ್ನು ಮುಂದೆ '1 ಮತ್ತು 2ನೇ ಎದುರುದಾರರು' ಎಂದು ಕ್ರಮವಾಗಿ, ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:–** ಮೈಸೂರು ಜಿಲ್ಲೆ ಕೆಆರ್ ನಗರ ತಾಲ್ಲೂಕ್ ಹೆಬ್ಬಾಳು ಗ್ರಾಮ ಪಂಚಾಯತ್ ವ್ಯಾಪ್ತಿಯ 1982ರಲ್ಲಿ ಬಡ ಜನರಿಗಾಗಿ ನಿವೇಶನ ಹಂಚಿಕೆಯಾಗಿದ್ದು, ಸದರಿ ನಿವೇಶನಗಳ ಪೈಕಿ ಕೆಲವು ನಿವೇಶನಗಳನ್ನು 1995–96ನೇ ಸಾಲಿನಲ್ಲಿ ಗ್ರಾಮ ಪಂಚಾಯತ್‌ನ ಅಧ್ಯಕ್ಷರಾಗಿದ್ದ ಶ್ರೀ.ಹೆಚ್.ಪಿ.ತಿಮ್ಮೇಗೌಡ ಎಂಬುವವರು ತಮ್ಮ ಕುಟುಂಬದ ಸದಸ್ಯರ ಹೆಸರಿನಲ್ಲಿ ಅಕ್ರಮವಾಗಿ ಖಾತಾ ಬದಲಾವಣೆ ಮಾಡಿಸಿದ್ದಾರೆ. ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್, ಮುಖ್ಯ ಕಾರ್ಯದರ್ಶಿಗಳು ಹಾಗೂ ಎದುರುದಾರರಿಗೆ ಅರ್ಜಿ ಸಲ್ಲಿಸಿದರೂ ಸಹ ಯಾವುದೇ ಕ್ರಮ ಕೈಗೊಂಡಿಲ್ಲವೆಂದು ಹೇಳಿದ್ದಾರೆ.

3. ದೂರಿನ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ–

1982–83ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಹಂಚಿಕೆಯಾಗಿರುವ ಆಶ್ರಯ ನಿವೇಶನದ ವಿವರಗಳು ಪಂಚಾಯತ್‌ನಲ್ಲಿ ಲಭ್ಯವಿಲ್ಲ. ತಾಲ್ಲೂಕ್ ಪಂಚಾಯತ್‌ನಲ್ಲೂ ಕೂಡ ಈ ಬಗ್ಗೆ ಮಾಹಿತಿ ಲಭ್ಯವಿಲ್ಲ. ಹೆಬ್ಬಾಳು ಗ್ರಾಮದ ಅಸೆಸ್‌ಮೆಂಟ್, ಡಿಮ್ಯಾಂಡ್ ವಹಿ ಹಾಗೂ ಇತರೆ ದಾಖಲೆಗಳನ್ನು ಪರಿಶೀಲಿಸಲಾಗಿ, ಖಾತೆದಾರರ ಪಟ್ಟಿಯ ಪ್ರಕಾರ ಶ್ರೀ.ಹೆಚ್.ಪಿ.ತಿಮ್ಮೇಗೌಡ ಬಿನ್ ಪುಟ್ಟಸ್ವಾಮಿಗೌಡ, ಶ್ರೀಮತಿ.ಭಾರತಿ ಕೋಂ ತಿಮ್ಮೇಗೌಡ, ಶ್ರೀಮತಿ.ನಾಗರತ್ನಮ್ಮ ಕೋಂ ಮರಿಗೌಡ ಮತ್ತು ಶ್ರೀ.ವೆಂಕಟೇಶ್ ಬಿನ್ ಪುಟ್ಟಸ್ವಾಮಿಗೌಡ ರವರ ಹೆಸರಿನಲ್ಲಿ ಖಾತೆಗಳು ನಮೂದಾಗಿರುತ್ತವೆ. ಆಸ್ತಿಗಳು ನೋಂದಣಿಯಾಗಿರುವ ಬಗ್ಗೆ ಮತ್ತು ಗಣಕೀಕೃತ ನಮೂನೆ-9 ಮತ್ತು 11ನ್ನು ವಿತರಿಸಿರುವ ಬಗ್ಗೆ ಮಾಹಿತಿ ಲಭ್ಯವಿಲ್ಲವೆಂದು ಹೇಳಿದ್ದಾರೆ.

4. ಎರಡನೇ (2ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ಶ್ರೀ.ಹೆಚ್.ಪಿ.ತಿಮ್ಮೇಗೌಡ ಮತ್ತು ಅವರ ಕುಟುಂಬದವರ ಹೆಸರಿನಲ್ಲಿ 1996ನೇ ಸಾಲಿನಲ್ಲಿ ಕಾನೂನುಬಾಹಿರವಾಗಿ ಖಾತೆ ಬದಲಾವಣೆಯಾಗಿದೆ ಎಂದು ಹೇಳುವ ಸಂದರ್ಭದಲ್ಲಿ ತಾವು ಹೆಬ್ಬಾಳು ಗ್ರಾಮ ಪಂಚಾಯತ್‌ನ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರಲಿಲ್ಲ. ತಾವು ದಿ:03/07/17 ರಿಂದ ಸದರಿ ಪಂಚಾಯತ್‌ನಲ್ಲಿ ಪ್ರಭಾರ ಪಂಚಾಯತ್‌ನ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ದೂರಿನಲ್ಲಿ ಮಾಡಲಾದ ಆಪಾದನೆಗಳು ಅಸ್ಪಷ್ಟವಾಗಿದೆ. ಸದ್ಯ ಪಂಚಾಯತ್‌ನಲ್ಲಿ ಲಭ್ಯವಿರುವ ಡಿಮ್ಯಾಂಡ್ ವಹಿಯ ಪ್ರಕಾರ, ಶ್ರೀ.ವೆಂಕಟೇಶ್ ಬಿನ್ ಪುಟ್ಟಸ್ವಾಮಿಗೌಡ, ಶ್ರೀ.ಹೆಚ್.ಪಿ.ತಿಮ್ಮೇಗೌಡ ಬಿನ್ ಪುಟ್ಟಸ್ವಾಮಿಗೌಡ, ಶ್ರೀಮತಿ.ಭಾರತಿ ಕೋಂ ತಿಮ್ಮೇಗೌಡ, ಶ್ರೀಮತಿ.ನಾಗರತ್ನಮ್ಮ ಕೋಂ ಮರಿಗೌಡ ಮತ್ತು ಶ್ರೀ.ಕೆ.ಆರ್.ಬಸವರಾಜ್ ಬಿನ್ ರಾಜೇಗೌಡ ರವರ ಹೆಸರುಗಳಲ್ಲಿ ನಿವೇಶನವಿರುವುದು ಕಂಡು ಬಂದಿದೆ. ಸದರಿ ದೂರು ರಾಜಕೀಯ ಪ್ರೇರಿತವಾಗಿದ್ದು, ದೂರುದಾರರು ಸದರಿ ಪಂಚಾಯತ್‌ನಲ್ಲಿ 2010–11ರಲ್ಲಿ ಒಂದೂವರೆ ವರ್ಷ ಪಂಚಾಯತ್ ಅಧ್ಯಕ್ಷರಾಗಿದ್ದರು. ದೂರಿನಲ್ಲಿ ಆಪಾದಿಸಿದಂತೆ, ತಾವು ಯಾವುದೇ ಅಕ್ರಮ ಎಸಗಿಲ್ಲವೆಂದು ಹೇಳಿದ್ದಾರೆ.

5. ಆಕ್ಷೇಪಣೆಗಳಿಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ –

1977–78ರಲ್ಲಿ ಬಡ ಜನರಿಗೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ನಿವೇಶನಗಳನ್ನು ಹಂಚಿಕೆ ಮಾಡಿದ್ದು, ಸದರಿ ಹಂಚಿಕೆಗೆ ಸಂಬಂಧಪಟ್ಟ ಮೂಲ ದಾಖಲಾತಿಗಳನ್ನು ಹಿಂದಿನ ಕಾರ್ಯದರ್ಶಿ ಮತ್ತು ಗ್ರಾಮ ಲೆಕ್ಕಾಧಿಕಾರಿಗಳು ಕ್ರಮ ವಹಿಸಿಲ್ಲ. ಶ್ರೀ.ಹೆಚ್.ಪಿ.ತಿಮ್ಮೇಗೌಡ, ಶ್ರೀಮತಿ.ಭಾರತಿ, ಶ್ರೀ.ವೆಂಕಟೇಶ್ ಮತ್ತು ಶ್ರೀಮತಿ.ನಾಗರತ್ನಮ್ಮ ರವರ ಹೆಸರುಗಳು 1982–83 ರಿಂದ 1994–95ನೇ ಸಾಲಿನವರೆಗೂ ಡಿಮ್ಯಾಂಡ್ ವಹಿಯಲ್ಲಿ ದಾಖಲಾಗಿಲ್ಲ. ಶ್ರೀ.ಹೆಚ್.ಪಿ.ತಿಮ್ಮೇಗೌಡ ರವರು 1995–96ನೇ ಸಾಲಿನಲ್ಲಿ ಹೆಬ್ಬಾಳು ಗ್ರಾಮ ಪಂಚಾಯತ್‌ನ ಅಧ್ಯಕ್ಷರಾಗಿ ಆಯ್ಕೆಯಾದ ನಂತರ

MYS/2897/17

ಯಾವುದೇ ಮೂಲ ದಾಖಲೆಗಳು ಇಲ್ಲದಿದ್ದರೂ ಸದರಿಯವರ ಹೆಸರುಗಳನ್ನು 1995ನೇ ಸಾಲಿನ ಡಿಮ್ಯಾಂಡ್ ವಹಿಗೆ ಸೇರಿಸಿರುವುದು ಲಭ್ಯವಿರುವ ದಾಖಲೆಗಳಲ್ಲಿ ಕಂಡು ಬಂದಿದ್ದು, ಈ ಬಗ್ಗೆ ಲಿಖಿತ ದೂರು ನೀಡಿದರೂ ಕ್ರಮ ವಹಿಸದೇ ಅಧಿಕಾರಿಗಳೂ ಸಹ ಶಾಮೀಲಾಗಿರುವುದು ಅಥವಾ ನಿಯಮಾನುಸಾರ ಕ್ರಮ ವಹಿಸಲು ಹಿಂದೇಟು ಹಾಕುತ್ತಿರುವುದು ಕಂಡು ಬಂದಿದೆ. ಮೇಲೆ ಹೇಳಿದ, ಶ್ರೀಮತಿ.ಭಾರತಿ ರವರು ಶ್ರೀ.ಹೆಚ್.ಪಿ.ತಿಮ್ಮೇಗೌಡ ರವರ ಪತ್ನಿ, ಶ್ರೀ.ಹೆಚ್.ಪಿ.ವೆಂಕಟೇಶ್ ರವರು ಸದರಿಯವರ ತಮ್ಮನಾಗಿದ್ದು, ಸದರಿಯವರ ಹೆಸರಿನಲ್ಲಿ ತಲಾ ಎರಡೆರಂತೆ ಒಟ್ಟು ಆರು ನಿವೇಶನಗಳು 1982 ರಿಂದ ಕರ ವಸೂಲಿಗಾರರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ.ಕೆ.ಆರ್.ಬಸವರಾಜು ರವರ ಹೆಸರಿನಲ್ಲಿ ಎರಡು ನಿವೇಶನಗಳು (ಒಂದನ್ನು ಮಾರಾಟ ಮಾಡಿದ್ದಾರೆ) ಮತ್ತು ಶ್ರೀ.ಹೆಚ್.ಪಿ.ತಿಮ್ಮೇಗೌಡ ರವರ ಅತ್ತಿಗೆ ಶ್ರೀಮತಿ.ನಾಗರತ್ನಮ್ಮ ರವರ ಹೆಸರಿಗೆ ಒಂದು ನಿವೇಶನವಿದ್ದು, ಸದರಿ ಶ್ರೀಮತಿ.ನಾಗರತ್ನಮ್ಮ ರವರು ಸರ್ಕಾರಿ ನೌಕರ ಶ್ರೀಮತಿ.ಮರಿಗೌಡ ರವರ ಪತ್ನಿಯಾಗಿದ್ದಾರೆ. ಪರಿಶಿಷ್ಟ ಜಾತಿ, ಪಂಗಡ ಹಾಗೂ ಹಿಂದುಳಿದ ವರ್ಗದವರಿಗೆ ಹಂಚಿಕೆಯಾಗಿದ್ದ ನಿವೇಶನಗಳು ಒಂದೇ ಕುಟುಂಬದವರಿಗೆ ಹಂಚಿಕೆ ಆಗಿದ್ದರೂ ಎದುರುದಾರರುಗಳು ಕಾಯಿದೆ ಪ್ರಕಾರ ಸೂಕ್ತ ಕಾನೂನು ಕ್ರಮ ಜರುಗಿಸಿಲ್ಲವೆಂದು ಹೇಳಿದ್ದಾರೆ.

6. ಒಂದನೇ (1ನೇ) ಎದುರುದಾರರ ಸೇವಾ ವಿವರದ ಪ್ರಕಾರ, ಸದರಿಯವರು ದಿ:11/09/17 ರಿಂದ ಕೆ.ಆರ್.ನಗರ ತಾಲ್ಲೂಕ್ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಆ ಮೊದಲು ಶ್ರೀ.ಸಿ.ಚಂದ್ರು ರವರು ನಿಯೋಜನೆ ಮೇರೆಗೆ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದರೆಂದು ಹೇಳಿದೆ. ಕಾರಣ, ಕೆ.ಆರ್.ನಗರ ತಾಲ್ಲೂಕ್ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ.ಸಿ.ಚಂದ್ರು ರವರನ್ನು 3ನೇ ಎದುರುದಾರರಾಗಿ ಮುಖಪುಟದಲ್ಲಿ ಸೇರಿಸಿ, ಸದರಿಯವರಿಂದ ದೂರಿಗೆ ಆಕ್ಷೇಪಣೆಯನ್ನು ಕೇಳಲಾಗಿ, ಸದರಿಯವರು ಆಕ್ಷೇಪಣೆಯನ್ನು ಸಲ್ಲಿಸಿಲ್ಲ.

7. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) 1996–97ನೇ ಸಾಲಿನ ಡಿಮ್ಯಾಂಡ್ ವಹಿಯನ್ವಯ ಶ್ರೀ.ತಿಮ್ಮೇಗೌಡ ಬಿನ್ ಪುಟ್ಟಸ್ವಾಮಿಗೌಡ ರವರ ಹೆಸರಿನಲ್ಲಿ ಜಂಜರ್ ನಂ.320 ಮತ್ತು 439 [ಸ್ವತ್ತಿನ ಸಂಖ್ಯೆ:318 ಮತ್ತು 436]; ಅವರ ಪತ್ನಿ ಶ್ರೀಮತಿ.ಭಾರತಿ ರವರ ಹೆಸರಿನಲ್ಲಿ ಜಂಜರ್ ನಂ.434 ಮತ್ತು 450 [ಸ್ವತ್ತಿನ ಸಂಖ್ಯೆ:431 ಮತ್ತು 447]; ಶ್ರೀ.ವೆಂಕಟೇಶ್ ಬಿನ್ ಪುಟ್ಟಸ್ವಾಮಿಗೌಡ ರವರ ಹೆಸರಿನಲ್ಲಿ ಜಂಜರ್ ನಂ.311 ಮತ್ತು 437 [ಸ್ವತ್ತಿನ ಸಂಖ್ಯೆ:309 ಮತ್ತು 434]; ಶ್ರೀ.ಕೆ.ಆರ್.ಬಸವರಾಜು ಬಿನ್ ರಾಜೇಗೌಡ ರವರ ಹೆಸರಿನಲ್ಲಿ ಜಂಜರ್ ನಂ.448 [ಸ್ವತ್ತಿನ ಸಂಖ್ಯೆ:445] ಮತ್ತು ಶ್ರೀಮತಿ.ನಾಗರತ್ನಮ್ಮ ಕೋಂ ಮರಿಗೌಡ ರವರ ಹೆಸರಿನಲ್ಲಿ ಜಂಜರ್ ನಂ.443, [ಸ್ವತ್ತಿನ ಸಂಖ್ಯೆ:440] ಇರುವುದು ಕಂಡು ಬಂದಿದೆ. ಸದರಿ ನಿವೇಶನಗಳೆಲ್ಲವೂ ಪರಿಶಿಷ್ಟ ಜಾತಿ, ಪಂಗಡ ಮತ್ತು ಹಿಂದುಳಿದವರಿಗೆ 1982ನೇ ಸಾಲಿನಲ್ಲಿ ಹಂಚಿಕೆಯಾಗಿವೆಯೆಂದು ದೂರುದಾರರು ಹೇಳುತ್ತಿದ್ದು, ಸದರಿ ಶ್ರೀ.ತಿಮ್ಮೇಗೌಡ ರವರು ಹೆಬ್ಬಾಳು ಪಂಚಾಯತ್ ಅಧ್ಯಕ್ಷರಾಗಿದ್ದ

N. Ananda

ಅವಧಿಯಲ್ಲಿ ಸದರಿ ನಿವೇಶನಗಳನ್ನು 1995ನೇ ಸಾಲಿನಲ್ಲಿ ಪಂಚಾಯತ್ ಡಿಮ್ಯಾಂಡ್ ವಹಿಯಲ್ಲಿ ತಮ್ಮ ಹಾಗೂ ತಮ್ಮ ಸಂಬಂಧಿಗಳ ಹೆಸರನ್ನು ಸೇರಿಸಿದ್ದಾರೆಂದು ದೂರುದಾರರು ಆಪಾದಿಸಿದ್ದಾರೆ. ಸದರಿ ಅಕ್ರಮದ ಬಗ್ಗೆ ತನಿಖೆ ನಡೆಸುವಲ್ಲಿ ಎದುರುದಾರರು ವಿಫಲರಾಗಿದ್ದಾರೆಂದು ದೂರಿನ ಆಪಾದನೆಯಾಗಿದೆ. ತನಿಖೆ ನಡೆಸಿ, ಕಾನೂನು ಕ್ರಮ ಜರುಗಿಸುವಂತೆ ಒತ್ತಾಯಿಸಿ, ದೂರುದಾರರು ತಾಲ್ಲೂಕ್ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ, ತಹಶೀಲ್ದಾರರಿಗೆ, ಪಂಚಾಯತ್ ರಾಜ್ ಇಲಾಖೆಗೆ 2016–17 ರಿಂದ ದೂರುಗಳನ್ನು ನೀಡುತ್ತಾ ಬಂದಿದ್ದಾರೆ. ಸದರಿ ದೂರಿನ ಬಗ್ಗೆ ತನಿಖೆ ನಡೆಸಿ, ಕ್ರಮವಹಿಸಿದ ಬಗ್ಗೆ ದಾಖಲೆಗಳಿಲ್ಲ;

2) ದೂರುದಾರರು ದಿನಾಂಕ:30/06/17 ಮತ್ತು 14/09/17ರಂದು ಕೆ.ಆರ್.ನಗರ ತಾಲ್ಲೂಕ್ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ದೂರು ನೀಡಿ, ಅಗತ್ಯ ಕ್ರಮ ವಹಿಸುವಂತೆ ಕೋರಿದ್ದಾರೆ. ದಿನಾಂಕ:30/06/17ರ ದೂರು ನೀಡುವ ಸಮಯದಲ್ಲಿ 3ನೇ ಎದುರುದಾರರು ಕೆ.ಆರ್.ನಗರ ತಾಲ್ಲೂಕ್ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು ಮತ್ತು ದಿನಾಂಕ:14/09/17ರ ದೂರು ನೀಡುವ ಸಮಯದಲ್ಲಿ ಮತ್ತು ಹಾಲೀ 1ನೇ ಎದುರುದಾರರು ಕರ್ತವ್ಯ ನಿರ್ವಹಿಸುತ್ತಿದ್ದು, ಸದರಿಯವರಿಬ್ಬರೂ ದೂರುದಾರರು ನೀಡಿರುವ ದೂರಿನ ಬಗ್ಗೆ ಯಾವುದೇ ಕ್ರಮ ವಹಿಸಿಲ್ಲ;

3) ಶ್ರೀ.ಹೆಚ್.ಪಿ.ತಿಮ್ಮೇಗೌಡ ರವರು 1995–96ನೇ ಸಾಲಿನಲ್ಲಿ ಹೆಬ್ಬಾಳು ಗ್ರಾಮ ಪಂಚಾಯತ್ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದ ಸಮಯದಲ್ಲಿ ಹಿಂದುಳಿದ ಜಾತಿ \ ಪಂಗಡ ಮತ್ತು ಬಡ ಜನರಿಗೆ ಹಂಚಿಕೆ ಮಾಡಲು ಮೀಸಲಿರಿಸಿದ ನಿವೇಶನಗಳ ಪೈಕಿ ತಮ್ಮ ಹೆಸರಿಗೆ ಎರಡು ನಿವೇಶನಗಳನ್ನು, ಎರಡು ನಿವೇಶನಗಳನ್ನು ತಮ್ಮ ಪತ್ನಿ ಶ್ರೀಮತಿ.ಭಾರತಿ ರವರ ಹೆಸರಿಗೆ, ಇನ್ನೆರಡು ನಿವೇಶನಗಳನ್ನು ತಮ್ಮ ಸಹೋದರ ಶ್ರೀ.ಹೆಚ್.ಪಿ.ವೆಂಕಟೇಶ್ ರವರ ಹೆಸರಿಗೆ, ಒಂದು ನಿವೇಶನವನ್ನು ತಮ್ಮ ಅತ್ತಿಗೆ ಶ್ರೀಮತಿ.ನಾಗರತ್ನಮ್ಮ ರವರ ಹೆಸರಿಗೆ, ಇನ್ನೊಬ್ಬ ಸಂಬಂಧಿ ಶ್ರೀ.ಕೆ.ಆರ್.ಬಸವರಾಜು ರವರ ಹೆಸರಿಗೆ ಎರಡು ನಿವೇಶನಗಳ ಖಾತೆ ಆಗಿರುವುದು ಪಂಚಾಯತ್ ದಾಖಲೆಗಳಲ್ಲಿ ಕಂಡು ಬಂದಿದೆ. ಸದರಿ ದೂರಿಗೆ ಸಂಬಂಧಿಸಿದಂತೆ, ಎದುರುದಾರರುಗಳು ಯಾವುದೇ ಕ್ರಮ ವಹಿಸದೇ, ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಸಾಬೀತಾಗಿದೆ.

8. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ 1 ರಿಂದ 3ನೇ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ಇಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಕ್ರಮ ಕೈಗೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

MYD/2897/17

9. ಆದ್ದರಿಂದ, ಶ್ರೀ.ತಿಮ್ಮೇಗೌಡ ಬಿನ್ ಪುಟ್ಟಸ್ವಾಮಿಗೌಡ ರವರ ಹೆಸರಿನಲ್ಲಿ ಜಂಜರ್ ನಂ.320 ಮತ್ತು 439 [ಸ್ವತ್ತಿನ ಸಂಖ್ಯೆ:318 ಮತ್ತು 436]; ಅವರ ಪತ್ನಿ ಶ್ರೀಮತಿ.ಭಾರತಿ ರವರ ಹೆಸರಿನಲ್ಲಿ ಜಂಜರ್ ನಂ.434 ಮತ್ತು 450 [ಸ್ವತ್ತಿನ ಸಂಖ್ಯೆ:431 ಮತ್ತು 447]; ಶ್ರೀ.ವೆಂಕಟೇಶ್ ಬಿನ್ ಪುಟ್ಟಸ್ವಾಮಿಗೌಡ ರವರ ಹೆಸರಿನಲ್ಲಿ ಜಂಜರ್ ನಂ.311 ಮತ್ತು 437 [ಸ್ವತ್ತಿನ ಸಂಖ್ಯೆ:309 ಮತ್ತು 434]; ಶ್ರೀ.ಕೆ.ಆರ್.ಬಸವರಾಜು ಬಿನ್ ರಾಜೇಗೌಡ ರವರ ಹೆಸರಿನಲ್ಲಿ ಜಂಜರ್ ನಂ.448 ಮತ್ತು 440 [ಸ್ವತ್ತಿನ ಸಂಖ್ಯೆ:445 ಮತ್ತು 437 (ಹಾಲೀ ಶ್ರೀಮತಿ.ಸರೋಜ ಕೋಂ ಶಿವಣ್ಣೇಗೌಡ ರವರ ಹೆಸರಿನಲ್ಲಿ ಖಾತೆಯಿದೆ)] ಮತ್ತು ಶ್ರೀಮತಿ.ನಾಗರತ್ನಮ್ಮ ಕೋಂ ಮರಿಗೌಡ ರವರ ಹೆಸರಿನಲ್ಲಿ ಜಂಜರ್ ನಂ.443, [ಸ್ವತ್ತಿನ ಸಂಖ್ಯೆ:440] ರವರುಗಳ ಹೆಸರಿನಲ್ಲಿ ದಾಖಲಾದ ಖಾತೆಯನ್ನು ರದ್ದುಪಡಿಸಿ, ಸದರಿ ನಿವೇಶನಗಳನ್ನು ಸರ್ಕಾರದ ಸುಪರ್ದಿಗೆ ತೆಗೆದುಕೊಳ್ಳಲು ಸೂಕ್ತ ಕ್ರಮ ಕೈಗೊಳ್ಳುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

10. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

N. Anand
17/10.

(ನ್ಯಾಯಾಮೂರ್ತಿ ಎನ್.ಆನಂದ)
ಉಪಲೋಕಾಯುಕ್ತ,
ಕರ್ನಾಟಕ ರಾಜ್ಯ.
16/10